ರವಿರಾಜ ಬೈಕಂಪಾಡಿ

ಕಲೆ: ಮುರಳೀಧರ ರಾಠೋಡ್

# ಅಪ್ರಿಯ ಸತ್ಯ

ನ್ಯಾಯಾಧೀಶರೇ ನ್ಯಾಯ ಕೇಳಿ ಬಂದ ಅಪರೂಪದ ಪ್ರಸಂಗ ಅಡ್ಡಂಡ ಕರಮಚಂದನ ಪತ್ತೆದಾರಿಕೆಗೆ ಸಿಕ್ಕಿದ ಗೌರವವೆಂದೇ ನನ್ನ ಭಾವನೆ. ಪ್ರಕರಣ ಘಟಿಸಿ, ಸುಮಾರು ಎರಡು ವರ್ಷಗಳ ಅನಂತರ ತನಿಖೆಗೆ ಬಂದ ಈ ಪ್ರಕರಣ ಕರಮಚಂದನ ಕೌಶಲಕ್ಕೊಂದು ಸವಾಲೇ ಆಗಿದ್ದಿತ್ತು.

ಡಿಸೆಂಬರ್ ತಿಂಗಳ ಒಂದು ದಿನ ರಾತ್ರಿ ಹತ್ತರ ಹೊತ್ತಿಗೆ ಕರೆಗಂಟೆ ಸದ್ದು ಮಾಡಿದಾಗ ನಮ್ಮಿಬ್ಬರಿಗೂ ಅಚ್ಚರಿ. ಕದ ತೆರೆದಾಗ, ತಲೆಯನ್ನು ಮುಚ್ಚಿಕೊಂಡಿದ್ದ ಆಸಾಮಿ ಆತುರದಿಂದ ಒಳ ಪ್ರವೇಶಿಸಿತು.

“ಅಪರಾತ್ರಿಯಲ್ಲಿ ಬಂದಿದುದಕ್ಕೆ ಕ್ಷಮೆಯಿರಲಿ!” ಹಾಗೆನ್ನುತ್ತಾ ಆ ವ್ಯಕ್ತಿ ತನ್ನ ತಲೆಯ ಮೇಲಿನ ಟೋಪಿಯನ್ನು ಸರಿಸಿತು. ತಕ್ಷಣ ನಾನು ಅವರನ್ನು ಗುರುತಿಸಿದೆ. ಮಡಿಕೇರಿಯ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರಾದ ಕುಲ್ಲಚೆಟ್ಟಿ ಕಾಶಿಯವರು!

“ಏನು ಸರ್? ಅವೇಳೆಯಲ್ಲಿ, ಈ ವೇಷದಲ್ಲಿ ಬಂದಿರಿ?”

“ನ್ಯಾಯಾಧೀಶನೊಬ್ಬ ವಕೀಲನ ಬಳಿ ಹೋದರೆ, ಅದಕ್ಕೇನು ಅರ್ಥವೆನ್ನುವುದನ್ನು ನಿಮಗೆ ಹೇಳಬೇಕೆ? ಕರಮಚಂದ, ನಿಮ್ಗೆ ಕೊಟ್ಟ ಮುಡಿಯ ಮಿಥಿಲಾ ಕೊಲೆ ಪ್ರಕರಣ ನೆನಪಿದೆಯೇ?” ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ ಕಾಶಿ ಕೇಳಿದರು.

“ಓಹ್! ಹಳೆಯ ಪ್ರಕರಣ. ಬಹುಶಃ ಎರಡು ವರ್ಷ ಕಳೆದಿರಬೇಕಲ್ಲವೇ? ಆಕೆಯ ಗಂಡ ಉಡುವೆರ ಹ್ಯಾರಿ ಚೆಟ್ಟಿಯಪ್ಪನೇ ಕೊಲೆ ಮಾಡಿದ್ದಲ್ವೇ?” ಕರಮಚಂದ ಮರು ಪ್ರಶ್ನಿಸಿದ.

“ಆ ಪ್ರಕರಣದ ವಿಚಾರಣೆಯು ನನ್ನ ಪೀಠದ ಮುಂದೆ ನಡೆಯುತ್ತಿದ್ದು, ಈಗ ವಾದ ಮಂಡನೆ ಹಂತದಲ್ಲಿದೆ. ಪ್ರಾಸಿಕ್ಯೂಷನ್ ಸಾಕಷ್ಟು ಸಾಕ್ಷಿಗಳನ್ನು ಹಾಜರು ಪಡಿಸಿ, ಬಲವಾಗಿಯೇ ಆರೋಪವನ್ನು ಸಾಬೀತು ಪಡಿಸಲು ಯತ್ನಿಸಿದೆ. ಆದರೆ, ನನಗೆ ಮಾತ್ರ ಏಕೋ ಏನೋ ಎಡವಟ್ಟಾಗಿದೆ ಅಂತ ಅನ್ನಿಸುತ್ತಿದೆ.”

ಕಾಶಿ ಆ ಪ್ರಕರಣದ ಒಂದಿಷ್ಟು ಮಾಹಿತಿ ನೀಡಿದರು. ಮಧ್ಯಾಹ್ನ ಮೂರರ ಹೊತ್ತಿಗೆ ಮಿಥಿಲಾ ತನ್ನ ಮನೆಯಲ್ಲಿ ಬೆಂಕಿ ಅವಘಡಕ್ಕೆ ಒಳಗಾದವಳು, ಸಂಜೆ ಏಳಕ್ಕೆ ಸತ್ತಳು. ಹೊಗೆಗೂಡಿನ ಬೆಂಕಿಗೆ ಬಿದ್ದು, ಸಾವು ಸಂಭವಿಸಿತ್ತು. ಆದರೆ, ಮರಣೋತ್ತರ ಪರೀಕ್ಷೆಯಲ್ಲಿ ಅದಕ್ಕೆ ಬೇರೆಯೇ ತಿರುವು ಸಿಕ್ಕಿತ್ತು. ಆಕೆಯ ತಲೆಯ ಹಿಂಭಾಗಕ್ಕೆ ಬಲವಾದ ಏಟು ಬಿದ್ದ ಕುರುಹುಗಳು ಪತ್ತೆಯಾಗಿದ್ದವು. ಪ್ರಾಯಶಃ ಬಲವಾಗಿ ಹೊಡೆದು ಅನಂತರ, ಆಕೆಯನ್ನು ಹೊಗೆಗೂಡಿನೊಳಕ್ಕೆ ತಳ್ಳಿರಬೇಕೆಂದು ಪೊಲೀಸರು ಊಹಿಸಿದರು. ಆ ಹೊತ್ತಿಗೆ ಮನೆಯಲ್ಲಿದ್ದುದು ಆಕೆಯ ಗಂಡ ಹ್ಯಾರಿ ಚೆಟ್ಟಿಯಪ್ಪ ಮಾತ್ರ. ಆತನೇ